ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು)

ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ : 1035

ಉತ್ತರಿಸಬೇಕಾದ ದಿನಾಂಕ : 10.03.2021.

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಸಚಿವರು.

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ	ಹಾಲು ಉತ್ಪಾದಿಸುವ ರೈತರಿಗೆ ಹಾಲಿಗೆ ಸರಿಯಾದ ಬೆಲೆ ಸಿಗದಿರುವುದು ಹಾಗೂ ಉತ್ಪಾದನಾ ವೆಚ್ಚ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. ಹಾಲಿನ ಉತ್ಪಾದನಾ ವೆಚ್ಚ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾ ಹಾಲು ಒಕ್ಕೂಟಗಳು ಹಾಲು ಉತ್ಪಾದಿಸುವ ರೈತರಿಗೆ ಕಾಲ-ಕಾಲಕ್ಕೆ ಬೆಲೆ ಪರಿಷ್ಕರಣೆ ಮಾಡಿ ಹೆಚ್ಚು ಬೆಲೆಯನ್ನು ನೀಡುತ್ತಿವೆ.
ಆ	ಗೋಹತ್ಯೆ ನಿಷೇದ ಕಾಯ್ದೆ ಜಾರಿಯಾದ ನಂತರ ತಮ್ಮ ಹಸುಗಳಿಗೆ ಸರಿಯಾದ ಬೆಲೆ ಸಿಗದೇ ರೈತರು ಆತಂಕಕಾರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಗೋಹತ್ಯೆ ನಿಷೇದ ಕಾಯ್ದೆ ಹೊಸದಾಗಿ ಜಾರಿಗೆ ಬಂದಿದ್ದು, ಈ ಬಗ್ಗೆ ರೈತರಿಗೆ ಅರಿವು ಮೂಡಿಸುವ ಕಾರ್ಯಕ್ರಮ ಮಾಡಲಾಗುತ್ತಿದೆ.
ಇ	ಕೆಲವೊಂದು ರಾಜ್ಯಗಳಲ್ಲಿ ಹಾಲಿಗೆ ಉತ್ತಮ ಬೆಲ ಕೊಡುತ್ತಿರುವಂತೆ ಕರ್ನಾಟಕ ರಾಜ್ಯದಲ್ಲಿ ಸಹ ಹಾಲಿನ ಬೆಲೆಯನ್ನು ಹೆಚ್ಚಿಸಬಹುದಲ್ಲವೇ;	ಕೋವಿಡ್-19ರ ನಂತರದ ದಿನಗಳಲ್ಲಿ ಒಕ್ಕೂಟಗಳು ಆರ್ಥಿಕವಾಗಿ ಚೇತರಿಸಿಕೊಳ್ಳುತ್ತಿದ್ದು, ಹಾಲಿನ ಖರೀದಿ ದರ ಹೆಚ್ಚಿಸಿರುವ ವಿವರವನ್ನು **ಅನುಬಂಧ-1**ರಲ್ಲಿ ವಿವರಿಸಲಾಗಿದೆ. ಜೊತೆಗೆ ರೈತರು ಉತ್ಪಾದಿಸುವ ಪ್ರತಿ ಲೀಟರ್ ಹಾಲಿಗೆ ರೂ.5/- ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ.
ಈ	ನಿರುಪಯುಕ್ತ ಹಸುಗಳಾದಾಗ ಅಂತಹ ಹಸುಗಳಿಗೆ ಸರ್ಕಾರ ಆರ್ಥಿಕ ಪರಿಹಾರ ನೀಡಬಹುದಲ್ಲವೇ;	ಸರ್ಕಾರವು ಅನುದಾನ ನೀಡುತ್ತಿರುವ ಖಾಸಗಿ ಗೋಶಾಲೆಗಳಿಗೆ ನಿರುಪಯುಕ್ತ ಹಸುಗಳನ್ನು ಬಿಡಬಹುದಾಗಿದೆ.

ಉ	ಪಶು ಆಹಾರವನ್ನು ಇಂತಹ ಹಾಲು ಉತ್ಪಾದಕ ರೈತರಿಗೆ ಸಬ್ಸಿಡಿ ದರದಲ್ಲಿ ಕೊಡಬಹುದಲ್ಲವೇ;	ಕರ್ನಾಟಕ ಹಾಲು ಮಹಾ ಮಂಡಳಿವತಿಯಿಂದ ಪಶು ಆಹಾರವನ್ನು ಉತ್ಪಾದನಾ ದರದಲ್ಲಿ ರೈತರಿಗೆ ನೀಡಲಾಗುತ್ತಿದೆ. ದಿನಾಂಕ:01.11.2020 ರಿಂದ ಹಂತ-ಹಂತವಾಗಿ ಇಲ್ಲಿಯವರೆವಿಗೆ ಪ್ರತಿ ಟನ್‌ಗೆ ರೂ.2000 ಕಡಿಮೆ ಮಾಡಲಾಗಿರುತ್ತದೆ.
ಊ	ಗೋಹತ್ಯೆ ನಿಷೇದ ಕಾಯ್ದೆ ಜಾರಿಯಾದ ನಂತರ ಈಗಿರುವ ಪಶುವೈದ್ಯಾಧಿಕಾರಿಗಳೇ ಎಲ್ಲಾ ಕೆಲಸವನ್ನು ನಿಭಾಯಿಸಹುದು ಎಂಬುದು ಸರ್ಕಾರದ ಗಮನಕ್ಕೆ ಬಂದಿದೇಯೇ?	ಗೋಹತ್ಯೆ ನಿಷೇದ ಕಾಯ್ದೆ ಅನ್ವಯ ಇಲಾಖೆಯ ಪಶುವೈದ್ಯಾಧಿಕಾರಿಗಳು ನಿರ್ವಹಿಸಬಹುದಾದಂತಹ ಕೆಲಸಗಳನ್ನು ಮಾತ್ರ ನಿರ್ವಹಿಸುತ್ತಾರೆ.

ಪಸಂಮೀ ಇ-22 ಕಹಾಮ 2021

ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ ಸಚಿವರು

ಅನುಬಂಧ –I

ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳಿ, ಬೆಂಗಳೂರು–29.

ಹಾಲು ಉತ್ಪಾದಕರಿಗೆ ನೀಡುತ್ತಿರುವ ಪ್ರತಿ ಲೀ. ಹಾಲಿನ ಖರೀದಿ ದರ.

ರೂ.ಗಳಲ್ಲಿ

ಕ್ರಸಂ.	ಹಾಲು ಒಕ್ಕೂಟಗಳು	ಜುಲೈ–2020	ಜನವರಿ–2021	ಫೆಬ್ರವರಿ–2021
1	ಬೆಂಗಳೂರು	24.00	24.00	26.00
2	ಕೋಲಾರ	24.00	26.00	27.00
3	ಮೈಸೂರು	25.00	24.00	24.00
4	ಚಾಮರಾಜನಗರ	24.00	24.00	24.00
5	ಮಂಡ್ಯ	24.00	22.50	22.50
6	ತುಮಕೂರು	25.00	23.00	25.00
7	ಹಾಸನ	24.00	24.00	24.00
8	ಧಾರವಾಡ	23.30	23.30	23.30
9	ಬೆಳಗಾವಿ	22.00	23.00	24.00
10	ವಿಜಯಪುರ	22.00	22.00	24.00
11	ಕಲಬುರಗಿ	25.60	25.60	25.60
12	ದಕ್ಷಿಣ ಕನ್ನಡ	28.67	28.00	29.70
13	ಶಿವಮೊಗ್ಗ	23.50	25.25	25.25
14	ಬಳ್ಳಾರಿ	24.50	24.50	24.50